## ಸಾರ್ವಜನಿಕ ಪ್ರಕಟಣೆ

**ಐಎಂಎ ಮತ್ತು ಇದರ ಸಮೂಹ ಕಂಪನಿಗಳ ಠೇವಣಿದಾರರು ಮತ್ತು ಭದ್ರತೆಯುಳ್ಳ ಸಾಲ ನೀಡಿಕೆದಾರರು ತಮ್ಮ ಹೂಡಿಕೆ \ ಸಾಲದ ಮೊತ್ತವನ್ನು ಹಿಂಪಡೆಯಲು ಅರ್ಜಿ ಸಲ್ಲಿಸುವಂತೆ ಕರೆನೀಡಿ ಕರ್ನಾಟಕ ಹಣಕಾಸು ಸಂಸ್ಥೆಯ ಠೇವಣಿದಾರರುಗಳ ಹಿತರಕ್ಷಣೆ ಕಾಯ್ದೆ, 2004ರ (ಕೆಪಿಐಡಿಎಫ್‌ಇ) ಪ್ರಕರಣ 7(2)ರ ಅನ್ವಯ.**

- ಐಎಂಎ ಮತ್ತು ಇದರ ಸಮೂಹ ಕಂಪನಿಗಳ ಠೇವಣಿದಾರರು ಆನ್‌ಲೈನ್ ಮೂಲಕ ತಮ್ಮ ಅರ್ಜಿಗಳನ್ನು ಸಲ್ಲಿಸಲು ಹಾಗೂ ಭದ್ರತೆಯುಳ್ಳ ಸಾಲ ನೀಡಿಕೆದಾರರು ತಮ್ಮ ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.
- ಅರ್ಜಿಗಳನ್ನು ಸಲ್ಲಿಸುವಿಕೆ ಪ್ರಾರಂಭಿಕ ದಿನಾಂಕ 25.11.2020 ಆಗಿರುವುದು. ಈ ಪ್ರಾರಂಭಿಕ ದಿನಾಂಕದಿಂದ 1 ತಿಂಗಳ ಒಳಗೆ ಅಂದರೆ ಅರ್ಜಿಗಳನ್ನು ಸಲ್ಲಿಸುವ ಕಡೆಯ ದಿನಾಂಕವಾದ 24.12.2020ರಂದು ಅಥವಾ ಅದಕ್ಕಿಂತ ಮುಂಚೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
- ಐಎಂಎ ಠೇವಣಿದಾರರು ತಮ್ಮ ಅರ್ಜಿಗಳನ್ನು ಯಾವುದೇ ಬೆಂಗಳೂರು-1/ಕರ್ನಾಟಕ-1/ಅಟಲ್‌ಜಿ ಜನ್‌ಸ್ನೇಹಿ ಕೇಂದ್ರಗಳಲ್ಲಿ ಆಪರೇಟರುಗಳ ನೆರವು ಪಡೆದು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು ಅಥವಾ ಠೇವಣಿದಾರರು ಯಾವುದೇ ಸ್ಥಳದಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.
- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವವರು ಬಯೋಮೆಟ್ರಿಕ್ ಆಧಾರಿತ ಆಧಾರ್ ದೃಢೀಕರಣೆ ಮೂಲಕವಾಗಲಿ ಅಥವಾ ತಮ್ಮ ಐಎಂಎ ಬ್ಯಾಂಕ್ ಖಾತೆಯಿಂದ (ಅಂದರೆ ಐಎಂಎ ಜೊತೆ ವ್ಯವಹಾರಗಳನ್ನು ನಡೆಸಲು ಬಳಸಲಾಗಿದ್ದ ಬ್ಯಾಂಕ್ ಖಾತೆಯಿಂದ) ಕೆಳ ಸಹಿದಾರ ಪ್ರಾಧಿಕಾರಿಯ ಬ್ಯಾಂಕ್ ಖಾತೆಗೆ ರೂ.1/- ಅನ್ನು ಎನ್‌ಇಎಫ್‌ಟಿ/ಐಎಂಪಿಎಸ್/ಆರ್‌ಟಿಜಿಎಸ್ ಮೂಲಕ ವರ್ಗಾವಣೆ ಮಾಡಿರುವ ಯುಟಿಆರ್ (ಯೂನಿಕ್ ಟ್ರಾನ್ಸಾಕ್ಷನ್ ರೆಫರೆನ್ಸ್) ಸಂಖ್ಯೆ ನೀಡಿಕೆ ಮೂಲಕವಾಗಲಿ ಇವುಗಳಲ್ಲಿ ಯಾವುದಾದರು ಒಂದರ ಮೂಲಕ ದೃಢೀಕರಿಸಬೇಕಾಗುವುದು.
- ಆದಾಗ್ಯೂ, ಆಧಾರ್ ಆಧಾರಿತ ಒಟಿಪಿ ಬಳಸಿ ಅಥವಾ ಐಎಂಎ ಯೇತರ ಬ್ಯಾಂಕ್ ಖಾತೆ ಮೂಲಕ (ಈ ಆಯ್ಕೆಗೆ ಪಾನ್ ಜೋಡಣೆ ಮಾಡಬೇಕಾಗುವುದು) ರೂ.1/- ವರ್ಗಾವಣೆ ಮಾಡಿದ್ದಕ್ಕೆ ಪಡೆದ ಯುಟಿಆರ್ ಬಳಸಿ ಆನ್‌ಲೈನ್ ಅರ್ಜಿ ಸಲ್ಲಿಸಲೂ ಸಹ ಠೇವಣಿದಾರರಿಗೆ ಅನುಮತಿ ನೀಡಲಾಗಿದೆ. ಆದರೆ ಅಂತಹ ಠೇವಣಿದಾರರು ಅನುಮೋದಿತ ಹಕ್ಕಿನ ಮೊತ್ತ ಪಡೆಯಲು ಅರ್ಹರಾಗಲು ಅರ್ಜಿ ಸಲ್ಲಿಸುವ ಕಡೆಯ ದಿನಾಂಕದಿಂದ 60 ದಿನಗಳ ಒಳಗೆ ಅಂದರೆ 24ನೇ ಫೆಬ್ರವರಿ 2021ರಂದು ಅಥವಾ ಅದಕ್ಕಿಂತ ಮುಂಚೆ ಮೇಲೆ ತಿಳಿಸಿರುವ ಎರಡು ವಿಧಾನದ ಪೈಕಿ ಯಾವುದಾದರು ಒಂದು ವಿಧಾನದ ಮೂಲಕ ದೃಢೀಕರಿಸಬೇಕು. 60 ದಿನಗಳ ಅವಧಿಯ ನಂತರವೂ ಕೂಡ ಸದರಿ ಅರ್ಜಿದಾರರು ಗುರುತಿನ ದಾಖಲೆಗಳಾದ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಮತದಾರರ ಚೀಟಿ (ಎಪಿಕ್) ಇತ್ಯಾದಿಗಳಲ್ಲಿ ಯಾವುದಾದರು ಒಂದರ ಜೊತೆಗೆ ಕೆಳಸಹಿದಾರ ಪ್ರಾಧಿಕಾರಿಯವರ ಕಚೇರಿಗೆ ಖುದ್ದಾಗಿ ಹಾಜರಾಗಿ ಅರ್ಜಿ ಸಲ್ಲಿಕೆಯನ್ನು ದೃಢೀಕರಿಸಬಹುದು.
- ಠೇವಣಿದಾರರು ಮರಣ ಹೊಂದಿದ್ದರೆ/ಆಸ್ಪತ್ರೆ ಸೇರಿದ್ದರೆ ಅವರ ನಾಮನಿರ್ದೇಶಿತರು/ಉತ್ತರಾಧಿಕಾರಿಯವರು ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಈ ರೀತಿ ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಕೆಲವು ದಾಖಲೆಗಳು ಸಲ್ಲಿಸಬೇಕಾಗಿರುತ್ತದೆ.
- ಆನ್‌ಲೈನ್‌ನಲ್ಲಿ ತಮ್ಮ ಅರ್ಜಿ ಸಲ್ಲಿಸುವ ಅರ್ಜಿದಾರರು ಪ್ರತಿ ಹೂಡಿಕೆಗೆ ಕೆಳಗೆ ತಿಳಿಸಿರುವ ದಾಖಲೆ ಪತ್ರಗಳನ್ನು ಅಪ್‌ಲೋಡ್ ಮಾಡುವುದು:
  - ಎ. ಎಲ್‌ಎಲ್‌ಪಿ: ಬಾಂಡ್ ಸರ್ಟಿಫಿಕೇಟ್ ಮತ್ತು ಹಣ ಠೇವಣಿ ಮಾಡಿರುವ/ಹಿಂಪಡೆದಿರುವ ಸಂಬಂಧದ ರಶೀದಿಗಳು.
  - ಬಿ. ಸಿಸಿಎಸ್: ಷೇರು ಸರ್ಟಿಫಿಕೇಟ್ ಮತ್ತು ಹಣ ಠೇವಣಿ ಮಾಡಿರುವ/ಹಿಂಪಡೆದಿರುವ ಸಂಬಂಧದ ರಶೀದಿಗಳು.
  - ಸಿ. ಐಎಂಎ ಗೋಲ್ಡ್: ಚಿನ್ನ ಒತ್ತೆಯಿಟ್ಟಿರುವ ಫಾರಂ ಮತ್ತು ಸಾಲ ಮರುಪಾವತಿಯ ರಶೀದಿಗಳು.
- ಆದಾಗ್ಯೂ, ಐಎಂಎ ಘೋಷಿತ ಬ್ಯಾಂಕ್ ಖಾತೆ ಬಳಸುವ ಮತ್ತು ಯಾರು ನೀಡಿರುವ ಠೇವಣಿ ವಿವರಗಳು ಲಭ್ಯವಿರುವ ಐಎಂಎ ಅಂಕಿ-ಅಂಶಕ್ಕೆ ತಾಳೆಯಾಗುವುದೋ ಅಂತಹ ಅರ್ಜಿದಾರರು ಮೇಲೆ ತಿಳಿಸಿರುವ ಯಾವುದೇ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಾಗಿರುವುದಿಲ್ಲ.
- ಆನ್‌ಲೈನ್ ಅರ್ಜಿ ಸಲ್ಲಿಸುವ ಅರ್ಜಿದಾರರು ದಾಖಲೆಗಳು ಅಪ್‌ಲೋಡ್ ಆಗಿರುವ ಪ್ರಸಂಗಗಳಲ್ಲಿ ಅವುಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೇ ದಿನಾಂಕದಿಂದ 60 ದಿನಗಳ ಒಳಗೆ ಅಂದರೆ 24ನೇ ಫೆಬ್ರುವರಿ 2021ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ವ್ಯಾಪ್ತಿಗೆ ಒಳಪಟ್ಟ ತಹಸೀಲ್ದಾರ್‌ರವರಿಂದ ಇ-ದೃಢೀಕರಣೆಯನ್ನೂ ಪಡೆದುಕೊಳ್ಳತಕ್ಕದ್ದು. ಇಲ್ಲದಿದ್ದರೆ ಅಂತಹ ಅರ್ಜಿಗಳನ್ನು ಅಪೂರ್ಣ ಎಂಬುದಾಗಿ ತೀರ್ಮಾನಿಸಲಾಗುವುದು ಮತ್ತು ಅವುಗಳು ತಿರಸ್ಕರಿಕೆಗೆ ಅರ್ಹರಾಗುವುದು.
- ಐಎಂಎ ಮತ್ತು ಇದರ ಸಮೂಹ ಕಂಪನಿಗಳ ಭದ್ರತೆಯುಳ್ಳ ಸಾಲ ನೀಡಿಕೆದಾರರು ಸಂಬಂಧಪಟ್ಟ ದಾಖಲೆ ಪತ್ರಗಳ ಬೆಂಬಲದೊಡನೆ ತಮ್ಮ ಸಾಲ ಹಿಂಪಡೆಯುವ ಅರ್ಜಿಗಳನ್ನು ಖುದ್ದಾಗಿಯಾಗಲಿ ಅಥವಾ ಇಂಡಿಯಾ ಪೋಸ್ಟ್‌ನ ಆರ್‌ಪಿಎಡಿ/ಸ್ಪೀಡ್ ಪೋಸ್ಟ್ ಮೂಲಕವಾಗಲಿ ಕೆಳಸಹಿದಾರ ಅಧಿಕಾರಿಯವರ ಕಚೇರಿಗೆ ಸಲ್ಲಿಸತಕ್ಕದ್ದು.
- ಕೆಳಸಹಿದಾರ ಪ್ರಾಧಿಕಾರಿಯ ಕಚೇರಿ ವಿಳಾಸ "ಐಎಂಎ ಪ್ರಕರಣದ ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಚೇರಿ, 2ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಶಾಂತಿನಗರ, ಬೆಂಗಳೂರು, ಕರ್ನಾಟಕ-560 027" ಮತ್ತು ಇದರ ಬ್ಯಾಂಕ್ ಖಾತೆಯು ಎಚ್‌ಡಿಎಫ್‌ಸಿ ಬ್ಯಾಂಕ್, ವಿಲ್ಸನ್ ಗಾರ್ಡನ್ ಶಾಖೆಯಲ್ಲಿ ಐಎಂಎ ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಹೆಸರಿನಲ್ಲಿರುವುದು. ಖಾತೆ ಸಂಖ್ಯೆ: 6442116442 ಮತ್ತು ಐಎಫ್‌ಎಸ್‌ಸಿ ಕೋಡ್: HDFC0001748.
- ಕಾಯ್ದೆಯ ಪ್ರಕರಣ 7(4) ಮತ್ತು 7(5)ರ ಅನ್ವಯ ಭದ್ರತೆಯುಳ್ಳ ಸಾಲ ನೀಡಿಕೆದಾರರು ಈ ಸೂಚನೆಯ ದಿನಾಂಕ ಅಂದರೆ 25-11-2020 ದಿನಾಂಕದಿಂದ 1 ತಿಂಗಳ ಅವಧಿಯೊಳಗೆ ಭದ್ರತೆಯ ಮೌಲ್ಯ ನಿರ್ಧರಣೆ ಮಾಡತಕ್ಕದ್ದು ಹಾಗೂ ಅದನ್ನು ಅವರ ಅರ್ಜಿ ಜೊತೆ ಕಳುಹಿಸಬೇಕು. ಇಲ್ಲದಿದ್ದರೆ ಕೆಳಸಹಿದಾರ ಪ್ರಾಧಿಕಾರಿಯು ತನ್ನ ಅತ್ಯುತ್ತಮ ಕ್ಷಮತೆಯ ತೀರ್ಮಾನದಂತೆ ಭದ್ರತೆಯ ಮೌಲ್ಯಮಾಪನ ಮಾಡಿಸುವರು ಮತ್ತು ಇವರು ಮಾಡಿಸಿದ ಈ ಮೌಲ್ಯವು ಭದ್ರತೆಯುಳ್ಳ ಸಾಲ ನೀಡಿಕೆದಾರರಿಗೆ ಬದ್ಧವಾಗಿರುವುದು.
- ಕಾಯ್ದೆಯ ಪ್ರಕರಣ 7(3)ರ ಅನ್ವಯ ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಪಾವತಿ ಮಾಡಲು ಅರ್ಹವೆಂದು ಪರಿಗಣಿಲಾಗುವುದಿಲ್ಲ.
- ತಪ್ಪಾಗಿ ಅಥವಾ ಆಧಾರವಿಲ್ಲದೆ ಸ್ವಯಂಸೃಷ್ಟಿತ ಅರ್ಜಿಗಳನ್ನು ಸಲ್ಲಿಸಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರುಗಳ ಮೇಲೆ ಸೂಕ್ತವಾದ ಕ್ರಿಮಿನಲ್ ಕ್ರಮ ಕೈಗೊಳ್ಳಬಹುದಾಗಿರುತ್ತದೆ.
- ಅರ್ಜಿಗಳನ್ನು ಸಲ್ಲಿಸುವ ವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅರ್ಜಿದಾರರು ವೆಬ್‌ಸೈಟ್ "imaclaims.karnataka.gov.in" ಇಲ್ಲಿಂದ ಅಥವಾ ಬೆಳಿಗ್ಗೆ 8.00 ರಿಂದ ರಾತ್ರಿ 8.00 ಗಂಟೆಯವರೆಗೆ ಕಾಲ್ ಸೆಂಟರ್ "080-46885959" ಇಲ್ಲಿಂದ ಪಡೆದುಕೊಳ್ಳಬಹುದು.

**ಐಎಂಎ ಪ್ರಕರಣಕ್ಕೆ ಕೆಪಿಐಡಿಎಫ್‌ಇ ಕಾಯ್ದೆ, 2004ರ ಅನ್ವಯದ ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ**

ವಾಸಾಸಂಇ/ಉನಿ.ನ/1639/ಎಂಸಿಎ/2020-21

ನ್ಯೂಸ್ ಲೈನ್ **ಬೆಂಗಳೂರು: 'ಆರೋಗ್ಯ ಸೇತು' ಮೊಬೈಲ್ ಆ್ಯಪ್ ಸುರಕ್ಷಿತವಲ್ಲ ಹಾಗೂ ಬಳಕೆದಾರರ ಖಾಸಗಿ ಮಾಹಿತಿಗೆ ರಕ್ಷಣೆ ಇಲ್ಲ ಎಂ**